**<u>ಸಾಕ್ಷಿಯನ್ನು ದಿನಾಂಕಃ 05-07-2024 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಕೆ ಎಂ ಆರ್ ವಕೀಲರವರಿಂದಃ</u>**

ದಾವಾ ಆಸ್ತಿ ಪ್ರತಿವಾದಿಗಳಿಗೆ ಅವರ ತಂದೆಯ ಕಡೆಯಿಂದ ಬಂದಿರುತ್ತದೆ. ನಾನು ವೃತ್ತಿಯಲ್ಲಿ ನ್ಯಾಯವಾದಿ ಎಂದರೆ ಸರಿ. ನಾನು ಹಣ್ಣಿನ ವ್ಯಾಪಾರ ಕೂಡ ನನ್ನ ಮಾವನವರೊಂದಿಗೆ ಸೇರಿಕೊಂಡು ಮಾಡುತ್ತೇನೆ. 1 ನೇ ಪ್ರತಿವಾದಿ ಗುತ್ತಿಗೆದಾರರಾಗಿದ್ದು, 2 ನೇ ಪ್ರತಿವಾದಿ ರಿಯಲ್ ಎಸ್ಟೇಟ್ ವ್ಯವಹಾರ ಮಾಡುವರು. ಪ್ರತಿವಾದಿಗಳಿಗೆ ಅವರ ತಂದೆಯಿಂದ ದಾವಾ ಸ್ವತ್ತು ನೇರವಾಗಿ ಬಂದಿದ್ದರ ಕುರಿತು ನಾನು ಖಾತಾ ಎಕ್ಸಟ್ರಾಕ್ಟನ್ನು ನೋಡಿ ತಿಳಿದುಕೊಂಡಿದ್ದೇನೆ. ನಾನು ಹಾಗೂ 1 ನೇ ಪ್ರತಿವಾದಿ ಬಾಲ್ಯದಿಂದಲೂ ಸ್ನೇಹಿತರು ಎಂದರೆ ಸರಿಯಲ್ಲ. ನಾವು ಒಂದೇ ಊರಿನವರು. 1 ನೇ ಪ್ರತಿವಾದಿ ನನಗೆ ದೂರದ ಸಂಬಂಧಿ ಎಂದರೆ ಸರಿಯಲ್ಲ. ಪ್ರತಿವಾದಿಗಳ ತಂದೆಗೆ ಪ್ರತಿವಾದಿಗಳನ್ನು ಹೊರತುಪಡಿಸಿ ಹೆಣ್ಣು ಮಕ್ಕಳು ಮಾತ್ರ ಇರುವರು. ಕ್ರಯ ಕರಾರು ಪತ್ರ ಆಗಿದೆ ಎಂದು ಹೇಳುವ ಕಾಲಕ್ಕೆ ಪ್ರತಿವಾದಿಗಳ ತಾಯಿ ಹಾಜರಿರಲಿಲ್ಲ. ಕರಾರು ಮಾಡಿಕೊಳ್ಳುವ ಕಾಲಕ್ಕೆ ನಾನು ಖಾತಾ ಎಕ್ಸಟ್ರಾಕ್ಯಟ್, ಡೋರ್ ನಂಬರ್, ವಾರ್ಡ್ ನಂಬರ್ ಇವುಗಳನ್ನು ಪರಿಶೀಲನೆ ಮಾಡಿದ್ದೇನೆ. ನಾನು ಪ್ರತಿವಾದಿಯರ ಸಹೋದರಿಯನ್ನು ಸಂಪರ್ಕ ಮಾಡಲು ಪ್ರಯತ್ನ ಮಾಡಿರುವುದಿಲ್ಲ. ಪ್ರತಿವಾದಿಗಳ ಸಹೋದರಿ ಹರಪನಹಳ್ಳಿಯವರಾಗಿರುವರು.

ಪ್ರತಿವಾದಿಗಳಿಗೆ ದಾವಾ ಸ್ವತ್ತನ್ನು ಹೊರತುಪಡಿಸಿ ಬೇರೆ ವಾಸದ ಮನೆ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಹೆಸರಿನಲ್ಲಿರುವ ಬೇರೆ ಮನೆಗಳ ಡೋರ್ ನಂಬರ್ ಹಾಗೂ ಇತರೆ ವಿವರಗಳು ನನಗೆ ಗೊತ್ತಿರುವುದಿಲ್ಲ. ಕ್ರಯ ಪತ್ರ ಬರೆದುಕೊಡುವ ಕಾಲಕ್ಕೆ ಪ್ರತಿವಾದಿಯರು ದಾವಾ ಸ್ವತ್ತಿನ ಮನೆಯಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಕಂಡುಬರುವ ಪ್ರತಿವಾದಿಯರ ವಿಳಾಸ ಹಾಗೂ ವಾದಪತ್ರದಲ್ಲಿ ಉಲ್ಲೇಖ ಮಾಡಿರುವ ವಿಳಾಸ ಎರಡೂ ಒಂದೇ ಎಂದರೆ ಸರಿ. ವಾದಪತ್ರದಲ್ಲಿ ಕಾಣಿಸಿರುವ ಶೆಡ್ಯೂಲ್ ಹಾಗೂ ನಿಪಿ-1 ರಲ್ಲಿ ಕಾಣಿಸಿರುವ ಶೆಡ್ಯೂಲ್ ಎರಡು ಒಂದೇ ಆಗಿರುತ್ತದೆ ಎಂದರೆ ಸರಿ. ದಾವಾ ಮನೆಯು ಏಕ ಅಂತಸ್ಥಿನ ಮನೆಯಾಗಿರುವುದು. ಕರಾರು ಮಾಡಿಕೊಳ್ಳುವ ಕಾಲಕ್ಕೆ ದಾವಾ ಸ್ವತ್ತಿನ ಮೌಲ್ಯ 15 ರಿಂದ 20 ಲಕ್ಷ ಇತ್ತು ಎಂದರೆ ಸರಿಯಲ್ಲ.

ಪ್ರತಿವಾದಿಗಳು ವಿಶ್ವಾಸ ನೆಲೆಯಲ್ಲಿ ನನ್ನಿಂದ ಸಾಲ ಪಡೆದುಕೊಂಡು ಮರುಪಾವತಿ ಮಾಡುವ ವ್ಯವಹಾರವನ್ನು ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳ ವಿರುದ್ಧ ಒಂದು ಚೆಕ್ ಬೌನ್ಸ್ ಕೇಸು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಬೇರೆ ಬೇರೆ ವ್ಯಕಿತಗಳ ವಿರುದ್ಧ ನ್ಯಾಯಾಲಯಗಳಲ್ಲಿ ಚೆಕ್ ಬೌನ್ಸ್ ಪ್ರಕರಣಗಳು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಪರ್ವಿನ್ ಬಾನು ಎಂದರೆ ನನ್ನ ಸಹೋದರಿ. ಪರ್ವಿನ್ ಬಾನು ರವರು ಒಂದು ಚೆಕ್ ಬೌನ್ಸ್ ಪ್ರಕರಣವನ್ನು ಸಿ.ಸಿ.ನಂ.106/2015 ರಂತೆ ದಾಖಲಿಸಿರುವರು ಎಂದರೆ

ನನಗೆ ಗೊತ್ತಿಲ್ಲ. ಮೊದಲಿನಿಂದಲೂ ನನಗೆ ಪ್ರತಿವಾದಿಗಳು ಸಂಬಂಧಿಕಾಗಿರುವ ಕಾರಣ ಅವರ ಪರಿಚಯ ಇರುತ್ತದೆ.

ಈ ಕರಾರು ಮಾಡಿಕೊಳ್ಳುವ ಕಾಲಕ್ಕೆ ಪ್ರತಿವಾದಿಗಳು ವ್ಯಾಪಾರದಲ್ಲಿ ತುಂಬಾ ನಷ್ಟ ಅನುಭವಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಈಗಲೂ ಸಹಿತ ದಾವಾ ಸ್ವತ್ತಿನ ಮನೆಯಲ್ಲಿ ಪ್ರತಿವಾದಿಗಳು ವಾಸವಿರುವರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದನ್ನು ಲೀಜಿಗೆ ನೀಡಿದ್ದಾರೆ ಎಂದು ನುಡಿದರು. ಪ್ರತಿವಾದಿಗಳಿಗೆ ಸಂಬಂಧಿಸಿದ ಆಧಾರ್ ಕಾರ್ಡ್, ರೇಷನ್ ಕಾರ್ಡ್ ಇತರೆ ದಾಖಲೆಗಳಲ್ಲಿ ದಾವಾ ಸ್ವತ್ತಿನ ವಿಳಾಸವು ಕಂಡುಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರ ಸಾಕ್ಷಿದಾರರಾದ ಹಸನ್ ಮಿಯಾ ಇವರ ಮನೆ ಕುಣಚೂರು ಗ್ರಾಮದಲ್ಲಿರುವುದು. ಅವರು ನನ್ನ ಸಂಬಂಧಿಕರಾಗಿರುವುದಿಲ್ಲ. ಇನ್ನೊಬ್ಬ ಸಾಕ್ಷಿದಾರರಾದ ಸಿ ಪೀರ್ ಅಹಮ್ಮದ್ ಇವರು ವಕೀಲರಾಗಿರುವರು.ನಾನು ಹಾಗೂ ಸದರಿ ವಕೀಲರು ಸ್ನೇಹಿತರು ಎಂದರೆ ಸರಿ. ಸದರಿ ಹಸನ್ ಮಿಯಾ ಇವರು ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ನಿಪಿ-1 ದಾಖಲೆಯನ್ನು ಚನ್ನಬಸಪ್ಪರವರು ಬರೆದಿರುವರು.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**